**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 112/2023**

| | | |
|---|---|---|
| **ಸಾಕ್ಷಿದಾರನ ಹೆಸರು** | : ಮೊಹಮ್ಮದ್ ರಿಹಾನ್ | **ಪಿ.ಡಬ್ಲ್ಯೂ– 1** |
| **ತಂದೆಯ ಹೆಸರು** | : ನಿಸಾರ್ ಅಹಮದ್ | **ಸಿ.ಡಬ್ಲ್ಯೂ– 1** |
| **ವಯಸ್ಸು** | : 27 ವರ್ಷ | |
| **ಉದ್ಯೋಗ** | : ಪಾರ್ಸಲ್ ಏಜೆಂಟ್ | |
| **ವಾಸಸ್ಥಳ** | : ಹಾಲಿ ವಾಸ ಬೆಂಗಳೂರು | |

**ಸಾಕ್ಷಿಯನ್ನು ಈ ದಿನ ದಿ:04.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ನನ್ನ ಸ್ವಂತ ಊರು ಮೈಸೂರು. ಚಾ.ಸಾ:2 ನನಗೆ ಪರಿಚಿತನಾಗಿದ್ದು, ನನ್ನ ಸಂಬಂಧಿ ಆಗಬೇಕು.

**2.** 2014 ರಲ್ಲಿ ನಾನು 8 ನೇ ಅಥವಾ 9 ನೇ ತರಗತಿಯಲ್ಲಿರಬಹುದು. ಆ ಸಮಯದಲ್ಲಿ ದಿ:–20.12.2014 ರಂದು ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ:2 ರವರು ಅಲ್–ಕರೀಮ್ ಶಾಲೆಯ ಮುಂಭಾಗದಿಂದ ಮನೆಗೆ ಹೋಗುತ್ತಿದ್ದೆವು. ಆಗ ನಮ್ಮ ಎದುರುಗಡೆಯಿಂದ 3 ಆಸಾಮಿಗಳು ನಡೆದುಕೊಂಡು ಬರುತ್ತಿದ್ದರು. ಅದರಲ್ಲಿ ಒಬ್ಬನಿಗೆ ನನ್ನ ಎಡಭುಜ ತಗುಲಿತು. ಆಗ ಅವರು 3 ಜನ ನಮಗೆ ಕೆಟ್ಟದಾಗಿ ಬೈಯಲು ಪ್ರಾರಂಭಿಸಿದರು. ಆ 3 ಜನ ನಮ್ಮ ಜೊತೆ ಗಲಾಟೆ ಪ್ರಾರಂಭಿಸಿ ನನಗೆ ಹೊಡೆಯಲು ಬಂದರು. ಆಗ ಚಾ.ಸಾ:2 ನನ್ನನ್ನು ರಕ್ಷಿಸಲು ಪ್ರಯತ್ನಿಸಿದನು.

ನಂತರ ಚಾ.ಸಾಃ2 ರವರು ನನ್ನನ್ನು ಕರೆದುಕೊಂಡು ಮುಂದೆ ಹೋದರು. ನಾವು ಮುಂದೆ ಹೋಗುತ್ತಿದ್ದಾಗ, ಹಿಂದಿನಿಂದ ಸದರಿ 3 ಜನ ಆಸಾಮಿಗಳು ಬಂದು ಅದರಲ್ಲಿ ಒಬ್ಬನು ನನ್ನನ್ನು ತಬ್ಬಿ ಹಿಡಿದುಕೊಂಡನು. ನಾನು ಹಿಂದೆ ತಿರುಗಿ ನೋಡುವಷ್ಟರಲ್ಲಿ ನನಗೆ ಕೈಯಿಂದ ಮುಖಕ್ಕೆ ಗುದ್ದಿದರು. ನಂತರ ಯಾವುದೋ ಚುಪಾದ ವಸ್ತುವಿನಿಂದ ನನ್ನ ಮುಖಕ್ಕೆ ಹಲ್ಲೆ ಮಾಡಿದರು. ಆಗ ನನಗೆ ರಕ್ತ ಬಂದಿತು. ನಂತರ ಅಲ್ಲಿ ಜನ ಸೇರಿದರು. ಜಗಳ ಬಿಡಿಸಿದರು. ನಂತರ ನನ್ನನ್ನು ಕೊಲಂಬಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ನನ್ನನ್ನು ದಾಖಲು ಮಾಡಿದರು. ನಾನು ಅಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

**3.** ನಂತರ ನಾನು ಉದಯಗಿರಿ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಿರುತ್ತೇನೆ. ನಾನು ದೂರಿನಲ್ಲಿ ಮೊದಲಿಗೆ ಯಾರು ಎಂದು ಹೆಸರು ಹೇಳಿರುವುದಿಲ್ಲ. ನಂತರ ಸೇರಿದ ಜನರಿಂದ ಮತ್ತು ಪೊಲೀಸರಿಂದ 3 ಜನ ಆಸಾಮಿಗಳ ಹೆಸರು ತಿಳಿದು ಬಂದಿರುತ್ತದೆ. ಅದರಲ್ಲಿ ಒಬ್ಬ ದಾದಾಪೀರ್, ವಸೀಮ್ ಮತ್ತು ಮೊಹಿನ್ ಎಂದು ತಿಳಿದು ಬಂದಿರುತ್ತದೆ.

**4.** ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–1(ಎ) ಎಂದು ಗುರುತಿಸಲಾಯಿತು.

**5.** ನಂತರ ನಾನು ಪೊಲೀಸರ ಜೊತೆಗೆ ಘಟನೆ ನಡೆದ ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿ ಪೊಲೀಸರು ಸ್ಥಳವನ್ನು ಪರಿಶೀಲನೆ ಮಾಡಿ ನನ್ನನ್ನು ಘಟನೆ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ನಾನೇ ಸ್ಥಳವನ್ನು ತೋರಿಸಿರುತ್ತೇನೆ. ಅಲ್ಲಿ ಪೊಲೀಸರು ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು,

ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ನಿಶಾನೆ ಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪಡೆದುಕೊಂಡಿರುವುದಿಲ್ಲ.

**6.** ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಹಲವು ವರ್ಷಗಳಾಗಿದ್ದು, ಸದರಿ ವ್ಯಕ್ತಿಯನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

**7.** ನನ್ನ ಬಟ್ಟೆಯನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು ನ್ಯಾಯಾಲಯದ ಅನುಮತಿಯ ಮೇರೆಗೆ ಅದನ್ನು ತೆಗೆದು ನೋಡಲಾಗಿ, ಅದರಲ್ಲಿ ಬಿಳಿ ಬಣ್ಣದ ಷರಟ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಷರಟನ್ನು ಮು.ಮಾಃ–1 ಎಂದು ಗುರುತಿಸಲಾಯಿತು.

**8.** ಸಾಕ್ಷಿಗೆ **3** ಫೋಟೋಗಳನ್ನು ತೋರಿಸಿ ಗುರುತಿಸಲು ಕೇಳಿದಾಗ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ಒಟ್ಟಾರೆಯಾಗಿ ನಿಶಾನೆ ಪಿ–**3** ಎಂದು ಗುರುತಿಸಲಾಯಿತು.

> (ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

**9.** ಘಟನೆ ದಿನ ವಸೀಮ್ ಮತ್ತು ಆತನ ಕಡೆಯವರು ನಮ್ಮ ಬಳಿ ಬಂದು ರೋಲ್ ಕಾಲ್ ಮಾಡಿ ಹಣ ನೀಡುವಂತೆ ಕೇಳಿದರು, ನೀವು ಹಣ ಇಲ್ಲ ಎಂದಾಗ ಅವರು ನಮ್ಮ

ಮೇಲೆ ಗಲಾಟೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆ ದಿನ ಹೋಗುವಾಗ ಭುಜ ಬಡಿದು ಗಲಾಟೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಂತರ ಚಾ.ಸಾಃ2 ರವರು ಅಲ್ಲಿ ಸಮಾಧಾನ ಮಾಡಿ ನನ್ನನ್ನು ಕರೆದುಕೊಂಡು ಹೋದರು. ನಂತರ ರಾತ್ರಿ 9 ಗಂಟೆಗೆ ನಾನು ಮತ್ತು ಚಾ.ಸಾಃ2 ರವರು ಅಲ್–ಕರೀಮ್ ಶಾಲೆಯ ಮುಂಭಾಗ ನಡೆದುಕೊಂಡು ಹೋಗುತ್ತಿದ್ದಾಗ ವಸೀಮ್, ದಾದಾಪೀರ್ ಮತ್ತು ಮುಹೀಬ್ 3 ಜನ ನನ್ನ ಜೊತೆ ಮತ್ತೆ ಜಗಳ ತೆಗೆದು ಏನೋ ರೋಲ್ ಕಾಲ್ ಹಣ ಕೇಳಿದರೆ ಇಲ್ಲಾ ಅಂತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ವಸೀಮ್ ನು ನನ್ನ ತಲೆಯ ಮೇಲೆ ಕಲ್ಲು ಎತ್ತಿ ಹಾಕುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆತನ ಜೊತೆ ಇದ್ದ ಇಬ್ಬರು ನನ್ನನ್ನು ತಬ್ಬಿ ಹಿಡಿದುಕೊಂಡರು. ಆಗ ವಸೀಮ್ ತನ್ನ ಜೇಬಿನಿಂದ ಒಂದು ಬ್ಲೇಡನ್ನು ತೆಗೆದು ನನ್ನ ಕತ್ತಿಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡಿದ್ದು, ಆಗ ಬ್ಲೇಡಿನ ಏಟು ನನ್ನ ಎಡಗೆನ್ನೆಗೆ ಮತ್ತು ಮೇಲು ತುಟಿಗೆ ಬಿದ್ದು, ಕುಯ್ದಿತ್ತು, ತೀವ್ರ ರಕ್ತ ಸ್ರಾವ ಆಗುತ್ತಿತ್ತು ಎಂದರೆ ಸಾಕ್ಷಿಯು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**10.** ಸ್ಥಳದಲ್ಲಿಯೇ ನನಗೆ ಸದರಿ ಅಸಾಮಿಗಳ ಹೆಸರು ತಿಳಿದಿದ್ದು, ನಾನು ಅದೇ ರೀತಿ ಪೊಲೀಸ್ ಠಾಣೆಯಲ್ಲಿ ಅವರ ಹೆಸರುಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಶಾನೆ ಪಿ–1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ನಿಮ್ಮನ್ನು ತಬ್ಬಿ ಹಿಡಿದುಕೊಂಡ ಇಬ್ಬರಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಒಬ್ಬನಾಗಿರುತ್ತಾನೆ ಎಂದರೆ ಸಾಕ್ಷಿಯು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ.

**11.** ಸ್ಥಳದಲ್ಲಿ ಪೊಲೀಸರ ಜೊತೆ ಬೇಟಿ ನೀಡಿದಾಗ ನನ್ನ ಸಮಕ್ಷಮ ಪೊಲೀಸರು ನನ್ನ ರಕ್ತ ಸಿಕ್ತವಾದ ಷರಟನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರನ್ನು ಬರೆದಿದ್ದು, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**12.** ದಿಃ–22.12.2014 ರಂದು ಇಬ್ಬರನ್ನು ದಸ್ತಗಿರಿ ಮಾಡಿ ನಂತರ ನನ್ನನ್ನು ಠಾಣೆಗೆ ಕರೆಸಿದಾಗ, ನಾನು ಠಾಣೆಯಲ್ಲಿ ವಸೀಮ್ ಮತ್ತು ದಾದಪೀರ್ ನನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅದಕ್ಕೆ ಪೂರಕವಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು.

**13.** ನನಗೆ ಆ ದಿನ ಬ್ಲೇಡಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನೆ ದಿನ ನ್ಯಾಯಾಲಯದ ಮುಂದೆ ಇದ್ದ ಆರೋಪಿ ಮತ್ತು ಇನ್ನುಳಿದ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ, ಈಗ ನ್ಯಾಯಾಲಯದ ಮುಂದಿರುವ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ– ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು**)**

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**